ಕುಶಾಲನಗರ ಯೋಜನಾ ಪ್ರಾಧಿಕಾರ ಕುಶಾಲನಗರ

ಕಾವೇರಿ ಬಡಾವಣೆ, ನಿ.ಸಂ.05, ಬ್ಲಾಕ್ ನಂ.01, ಕುಶಾಲನಗರ – 571234

Email Id: kushalnagaradtp@hotmail.com ದೂರವಾಣಿ ಸಂ: 08276–274040

ಸಂಖ್ಯೆ:ಕುಯೋಪ್ರಾ/ಪ್ರಾ.ಸಭೆ/47/2021–22 ದಿನಾಂಕ:

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ.ಎಂ.ಎಂ. ಚರಣ್ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 15–02–2022 ರ ಮಂಗಳವಾರದಂದು ಪೂರ್ವಾಹ್ನ 11.30 ಗಂಟೆಗೆ ಜರುಗಿದ 47ನೇ ಸಾಮಾನ್ಯ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರು :–

1) ಶ್ರೀ ಎಂ.ಎಂ. ಚರಣ್, ಅಧ್ಯಕ್ಷರು
2) ಸದಸ್ಯ ಕಾರ್ಯದರ್ಶಿ
3) ಶ್ರೀ ವೈಶಾಖ್, ನಾಮನಿರ್ದೇಶಿತ ಸದಸ್ಯರು.
4) ಶ್ರೀ ಪಂಡರೀಕಾಕ್ಷ, ನಾಮನಿರ್ದೇಶಿತ ಸದಸ್ಯರು
5) ಶ್ರೀ ಮಧುಸೂಧನ್, ನಾಮನಿರ್ದೇಶಿತ ಸದಸ್ಯರು
6) ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಕುಶಾಲನಗರ
7) ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರು

ಗೈರುಹಾಜರಾದವರು :–

1) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
   ಮುಳ್ಳುಸೋಗೆ ಗ್ರಾಮ ಪಂಚಾಯಿತಿ
2) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
   ಕೂಡುಮಂಗಳೂರು ಗ್ರಾಮ ಪಂಚಾಯಿತಿ
3) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
   ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ

ವಿಷಯ ಸಂಖ್ಯೆ:– 1):– ದಿನಾಂಕ: 24–12–2021 ರಂದು ನಡೆದ 46ನೇ ಯೋಜನಾ ಪ್ರಾಧಿಕಾರದ ಸಾಮಾನ್ಯ ಸಭೆಯ ನಡವಳಿಗಳನ್ನು ಸ್ಥಿರೀಕರಿಸಿರುವ ಬಗ್ಗೆ.

ಟಿಪ್ಪಣಿ : ದಿನಾಂಕ: 24–12–2021 ರಂದು ನಡೆದ 46ನೇ ಪ್ರಾಧಿಕಾರದ ಸಭೆಯ ನಡವಳಿಗಳನ್ನು ಓದಿ ಒಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ:– :– ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಓದಿ, ಪ್ರತಿಯೊಂದು ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಯಿತು. ನಡವಳಿಗಳನ್ನು ಒಪ್ಪಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ:– 2):– ಪ್ರಾಧಿಕಾರದ ಖಾತೆಗೆ ಡಿಸೆಂಬರ್ 2021 ಮತ್ತು ಜನವರಿ 2022 ರ ಮಾಹೆಯ ಜಮಾ ಮತ್ತು ಖರ್ಚುಗಳ ವಿವರದ ಬಗ್ಗೆ ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ : ಡಿಸೆಂಬರ್ 2021 ಮತ್ತು ಜನವರಿ 2022 ರ ಮಾಹೆಯ ಜಮಾ ಮತ್ತು ಖರ್ಚುಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದ್ದು, ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ

ನಿರ್ಣಯ:– ಡಿಸೆಂಬರ್ 2021 ಮತ್ತು ಜನವರಿ 2022 ರ ಮಾಹೆಯ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ: 03 – ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕೆ.ಟಿ.ಸಿ.ಪಿ. ಕಾಯ್ದೆ ಕಲಂ 13(1)ರನ್ವಯ ತಾತ್ಕಾಲಿಕ ಅನುಮೋದನೆಯಾಗಿರುವ ಮಹಾಯೋಜನೆ ನಕ್ಷೆಗಳನ್ನು ಕೆ.ಟಿ.ಸಿ.ಪಿ. ಕಾಯ್ದೆ ಕಲಂ 13(2)ರನ್ವಯ ಅಂತಿಮ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸುವ ಸಂಬಂಧ.

ಪು.ತಿ.ನೋ

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ರೂಪಿಸಿರುವ ಮಹಾಯೋಜನೆ ನಕ್ಷೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 469 ಮೈಅಪ್ರಾ 2014 ದಿನಾಂಕ: 03–12–2014 ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 13(1) ರನ್ವಯ ಸರ್ಕಾರವು ತಾತ್ಕಾಲಿಕ ಅನುಮೋದನೆಯನ್ನು ನೀಡಿರುತ್ತದೆ. ಆ ಪ್ರಕಾರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ದಿನಾಂಕ: 09–01–2015 ರಂದು ವಿಜಯ ಕರ್ನಾಟಕ ರಾಜ್ಯ ದಿನಪತ್ರಿಕೆ ಹಾಗೂ ಶಕ್ತಿ ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟಿಸಿ 60 ದಿನಗಳ ಕಾಲಾವಕಾಶ ನೀಡಿ ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ನಿಗಧಿತ ಅವಧಿಯೊಳಗೆ ಒಟ್ಟು 73 ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿದ್ದು ಸದರಿ ಆಕ್ಷೇಪಣೆಗಳನ್ನು ದಿನಾಂಕ: 18–05–2017 ರಂದು ನಡೆದ ಯೋಜನಾ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಯೋಜನಾ ದೃಷ್ಟಿಯಿಂದ ಸೂಕ್ತವಾಗಿರುವ 29 ಆಕ್ಷೇಪಣೆಗಳನ್ನು ಪರಿಗಣಿಸಿ ನಕ್ಷೆಯಲ್ಲಿ ಅಳವಡಿಸಿಕೊಂಡು ತದನಂತರ ಮಹಾಯೋಜನೆ ನಕ್ಷೆಯಲ್ಲಿ ಭೂ–ಉಪಯೋಗಗಳನ್ನು ಅಳವಡಿಸುವ ಸಂದರ್ಭ ಕೆಲವೊಂದು ಭೂ–ಪರಿವರ್ತಿತ ಜಮೀನನ್ನು ಅಳವಡಿಸದೇ ಬಿಟ್ಟುಹೋಗಿರುವುದು ಹಾಗೂ ರಸ್ತೆ ಪರಿಚಲನೆ ಸಂಬಂಧಿಸಿದಂತೆ ನ್ಯೂನತೆಗಳು ಕಂಡುಬಂದಿರುವುದನ್ನು ಗಮನಿಸಿ ಅವುಗಳನ್ನು ಸರಿಪಡಿಸಿ ಅಳವಡಿಸಿಕೊಳ್ಳುವ ಬಗ್ಗೆ ದಿನಾಂಕ: 23–01–2018, 07–09–2019 ರಂದು ಚರ್ಚಿಸಿ ನಿರ್ಣಯಿಸಿಕೊಂಡು ಮಹಾಯೋಜನೆ ನಕ್ಷೆಯಲ್ಲಿ ಅಳವಡಿಸಿಕೊಂಡಿರುವುದು ಕಂಡುಬಂದಿದ್ದು, ಸಿದ್ಧಪಡಿಸಿರುವ ಮಹಾಯೋಜನೆ ನಕ್ಷೆಯನ್ನು ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಮೈಸೂರು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು ಕಛೇರಿಯ ಪರಿಶೀಲನೆಗೆ ಹಲವು ಬಾರಿ ಒಳಪಡಿಸಲಾಗಿದ್ದು, ಯಾವುದೇ ಕಾನೂನು ತೊಡಕುಗಳು ಉಂಟಾಗದಂತೆ ಕ್ರಮವಹಿಸಲು ಮತ್ತು ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ಸಮಗ್ರ ಅಭಿವೃದ್ಧಿಯ ಯೋಜನಾ ದೃಷ್ಟಿಯಿಂದ ಕೇಂದ್ರ ಕಛೇರಿಯಲ್ಲಿ ಸೂಚಿಸಲಾಗಿರುವ ಮಾರ್ಪಾಡುಗಳನ್ನು ನಕ್ಷೆಯಲ್ಲಿ ಅಳವಡಿಸಿಕೊಳ್ಳಲು ದಿನಾಂಕ: 02–07–2021, 24–12–2021 ರಂದು ನಡೆದ ಯೋಜನಾ ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಿ ಸೂಕ್ತ ನಿರ್ಣಯಗಳನ್ನು ಕೈಗೊಳ್ಳಲಾಗಿದ್ದು, ಸದರಿ ನಿರ್ಣಯದಂತೆ ಮಹಾಯೋಜನೆ ನಕ್ಷೆಯನ್ನು ಪರಿಷ್ಕರಿಸಿಕೊಂಡು ಸೂಕ್ತ ನಿಯಮಗಳನ್ನು ವಲಯ ನಿಯಮಾವಳಿಯಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಸದರಿ ಮಹಾಯೋಜನೆ ನಕ್ಷೆಗಳನ್ನು ಹಾಗೂ ವರದಿ–ವಲಯನಿಯಮಾವಳಿಗಳನ್ನು ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 13(2) ರನ್ವಯ ಸರ್ಕಾರದ ಅಂತಿಮ ಅನುಮೋದನೆಗಾಗಿ ಮಾನ್ಯ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖೇನ ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ವಿಷಯವನ್ನು ಸಭೆಯ ಚರ್ಚೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 13(1) ರನ್ವಯ ತಾತ್ಕಾಲಿಕ ಅನುಮೋದನೆಗೊಂಡಿರುವ ಮಹಾಯೋಜನೆ ನಕ್ಷೆಗೆ ಸಂಬಂಧಿಸಿದಂತೆ ರಾಜ್ಯಪತ್ರದಲ್ಲಿ ಹಾಗೂ ದಿನಪತ್ರಿಕೆಗಳಲ್ಲಿ ಪ್ರಕಟಿಸಿ 60 ದಿನಗಳ ಕಾಲಾವಕಾಶ ನೀಡಿ ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಿ ನಿಗಧಿತ ಅವಧಿಯಲ್ಲಿ ಸ್ವೀಕರಿಸಿರುವ 73 ಆಕ್ಷೇಪಣೆ ಪೈಕಿ ಯೋಜನಾ ದೃಷ್ಟಿಯಲ್ಲಿ ಸೂಕ್ತವಾಗಿರುವ 29 ಆಕ್ಷೇಪಣೆಗಳನ್ನು ಹಿಂದಿನ ಪ್ರಾಧಿಕಾರವು ದಿನಾಂಕ: 18–05–2017 ರಂದು ಪರಿಗಣಿಸಿ ನಕ್ಷೆಯಲ್ಲಿ ಅಳವಡಿಸಿಕೊಂಡಿರುವುದು ಕಂಡುಬಂದಿದೆ. ಮಹಾಯೋಜನೆ ನಕ್ಷೆ ಹಾಗೂ ವರದಿಯನ್ನು ವಿಭಾಗೀಯ ಕಛೇರಿ ಹಾಗೂ ಕೇಂದ್ರ ಕಛೇರಿಯಲ್ಲಿ ತಪಾಸಣೆಗೆ ಒಳಪಡಿಸಿದಾಗ ಯೋಜನಾ ದೃಷ್ಟಿಯಲ್ಲಿ ಸೂಚಿಸಿರುವ ಅಂಶಗಳನ್ನು ಪ್ರಾಧಿಕಾರದ ಸಭೆಗೆ ಮಂಡಿಸಿ ಸೂಕ್ತ ನಿರ್ಣಯದೊಂದಿಗೆ ಮಹಾಯೋಜನೆ ನಕ್ಷೆಯಲ್ಲಿ ಹಾಗೂ ವಲಯನಿಯಮಾವಳಿಯಲ್ಲಿ ಅಳವಡಿಸಿಕೊಳ್ಳಲಾಗಿದ್ದು ಮಹಾಯೋಜನೆ ನಕ್ಷೆ ಹಾಗೂ ವರದಿ–ವಲಯನಿಯಮಾವಳಿಯನ್ನು ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 13(2) ರಡಿ ಸರ್ಕಾರದ ಅನುಮೋದನೆಗಾಗಿ ಮಾನ್ಯ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸಲ್ಲಿಸಬೇಕಿರುವುದರಿಂದ ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

ಪು.ತಿ.ನೋ

ನಿರ್ಣಯ: ವಿಷಯದ ಬಗ್ಗೆ ಕೂಲಂಕುಷವಾಗಿ ಸಭೆಯಲ್ಲಿ ಚರ್ಚಿಸಲಾಯಿತು. ಮಹಾಯೋಜನೆ ನಕ್ಷೆಗಳನ್ನು ಸಭೆಯಲ್ಲಿ ಪ್ರದರ್ಶಿಸಿ ಸಭೆಗೆ ನಕ್ಷೆಗಳ ಬಗ್ಗೆ ಸದಸ್ಯ ಕಾರ್ಯದರ್ಶಿಯವರು ವಿವರಿಸಿದರು. ಎಲ್ಲಾ ನಕ್ಷೆಗಳನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿತು. ತಾತ್ಕಾಲಿಕ ಅನುಮೋದಿತ ಮಹಾಯೋಜನೆ ನಕ್ಷೆಗಳಿಂದ ಅಂತಿಮ ಅನುಮೋದನೆಗೆ ಸಲ್ಲಿಸಲಾಗುತ್ತಿರುವ ಮಹಾಯೋಜನೆ ನಕ್ಷೆಗಳಲ್ಲಿ ಅಳವಡಿಸಲಾಗಿರುವ ಎಲ್ಲಾ ಮಾರ್ಪಾಡುಗಳನ್ನು ಮತ್ತು ತಾತ್ಕಾಲಿಕ ಅನುಮೋದನೆಯಾಗಿರುವ ವರದಿ–ವಲಯ ನಿಯಮಾವಳಿಯಿಂದ ಅಂತಿಮ ವರದಿ–ವಲಯ ನಿಯಮಾವಳಿಗೆ ಅಳವಡಿಸಿರುವ ಎಲ್ಲಾ ಬದಲಾವಣೆಗಳನ್ನು ಸಭೆಯು ಒಪ್ಪಿತು ಹಾಗೂ ಮಾನ್ಯ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖೇನ ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 13(2) ರನ್ವಯ ಮಹಾಯೋಜನೆ ನಕ್ಷೆಗಳನ್ನು ವರದಿ–ವಲಯ ನಿಯಮಾವಳಿಯನ್ನು ಸರ್ಕಾರದ ಅಂತಿಮ ಅನುಮೋದನೆಗಾಗಿ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ ನಿರ್ಣಯಿಸಲಾಗಿದೆ.

ವಿಷಯ ಸಂಖ್ಯೆ: 04 – ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಕುಶಾಲನಗರ ಪಟ್ಟಣ ಪಂಚಾಯಿತಿ ಪ್ರದೇಶದಲ್ಲಿರುವ ಕೆರೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಕಾವೇರಿ ರಿವರ್ ಸೇವಾ ಟ್ರಸ್ಟ್ (ರಿ), ಕುಶಾಲನಗರ ಇವರು ಟ್ರಸ್ಟ್‌ನ ಸಹಯೋಗದೊಂದಿಗೆ ಕುಶಾಲನಗರ ಐತಿಹಾಸಿಕ ಕೆರೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಯೋಜನೆ ರೂಪಿಸಲು ಕೋರಿ ಈ ಕಛೇರಿಗೆ ಮನವಿ ಸಲ್ಲಿಸಿದ್ದು, ಸದರಿ ವಿಷಯವನ್ನು ದಿನಾಂಕ: 05–02–2021 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಕೂಲಂಕುಷವಾಗಿ ಚರ್ಚಿಸಿ, ಕಾವೇರಿ ರಿವರ್ ಸೇವಾ ಟ್ರಸ್ಟ್ ರವರು ಅರ್ಜಿಯಲ್ಲಿ ನಮೂದಿಸಿರುವ ತಾವರೆಕೆರೆ, ಸೋಮೇಶ್ವರ ದೇವರ ಕೆರೆ, ಕುಳುವಾಡಿಕಟ್ಟೆ ಕೆರೆ ಮತ್ತು ಕೋಣಮಾರಿ ಕೆರೆಗಳ ಸರ್ವೆ ಕಾರ್ಯ ನಡೆಸಿ ಗಡಿ ಗುರುತು ಮಾಡಿಸಿಕೊಡುವಂತೆ ಹಾಗೂ ಕೆರೆಗೆ ಸಂಬಂಧಪಟ್ಟ ದಾಖಲೆಗಳಾದ ಆರ್.ಟಿ.ಸಿ. ಸರ್ವೆ ನಕ್ಷೆ ಇತ್ಯಾದಿ ದಾಖಲೆಗಳನ್ನು ನೀಡುವಂತೆ ಕೋರಿ ಕಂದಾಯ ಇಲಾಖೆಗೆ ಪತ್ರ ಬರೆಯುವಂತೆ ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ಹಾಗೂ ಗಡಿ ಗುರುತಿಸಿದ ನಂತರ ಅರ್ಜಿದಾರರು ಕೋರಿರುವ ಕೆರೆಗಳ ಪೈಕಿ ಆದ್ಯತೆಯ ಮೇರೆಗೆ ಕೆರೆಯನ್ನು ಪುನರುಜ್ಜೀವನಗೊಳಿಸುವ ಬಗ್ಗೆ ಪ್ರಾಧಿಕಾರದ ಮುಂದಿನ ಸಭೆಯಲ್ಲಿ ಚರ್ಚಿಸಲು ತೀರ್ಮಾನಿಸಲಾಗಿದ್ದು, ಅದರಂತೆ ಸದರಿ ಕೆರೆಗಳ ಸರ್ವೆ ಕಾರ್ಯ ನಡೆಸಿ ಗಡಿ ಗುರುತು ಮಾಡಿಕೊಡುವಂತೆ ಹಾಗೂ ಕೆರೆಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ನೀಡುವಂತೆ ಕಂದಾಯ ಇಲಾಖೆಗೆ ದಿನಾಂಕ: 15–02–2021 ರಂದು ಈ ಕಛೇರಿಯಿಂದ ಪತ್ರ ಬರೆದಿದ್ದು, ಕಂದಾಯ ಇಲಾಖೆಯಿಂದ ದಿನಾಂಕ: 10–03–2021 ರಂದು ತಾವರೆಕೆರೆ ಹಾಗೂ ಸೋಮೇಶ್ವರ ದೇವರ ಕೆರೆಗಳ ಸರ್ವೆ ಕಾರ್ಯವು ಪ್ರಾಧಿಕಾರದ ಅಧ್ಯಕ್ಷರು, ಸದಸ್ಯರುಗಳು, ಪಟ್ಟಣ ಪಂಚಾಯಿತಿ ಅಧ್ಯಕ್ಷರು, ಮುಖ್ಯಾಧಿಕಾರಿಗಳು, ಸಾರ್ವಜನಿಕರು ಹಾಗೂ ಪತ್ರಕರ್ತರ ಸಮ್ಮುಖದಲ್ಲಿ ನಡೆದಿರುತ್ತದೆ. ಸರ್ವೆ ಕಾರ್ಯದ ವರದಿ ಹಾಗೂ ದಾಖಲೆಗಳನ್ನು ಪ್ರಾಧಿಕಾರದ ಮುಂದಿನ ಕ್ರಮಕ್ಕಾಗಿ ಒದಗಿಸುವಂತೆ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದ್ದು, ಸರ್ವೆ ವರದಿ, ನಕ್ಷೆ ಮತ್ತು ಪಹಣಿ (ಆರ್.ಟಿ.ಸಿ) ಯನ್ನು ತಹಶೀಲ್ದಾರರು, ಕುಶಾಲನಗರ ಇವರು ದಿನಾಂಕ: 14–01–2022 ರಂದು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಬೈಚನಹಳ್ಳಿ ಗ್ರಾಮ ಸ.ನಂ. 35 ರಲ್ಲಿರುವ ಕೆರೆಯು (ತಾವರೆಕೆರೆ, ಆರ್.ಟಿ.ಸಿ ಯಂತೆ ವಿಸ್ತೀರ್ಣ 1.91 ಎಕರೆ) ಒತ್ತುವರಿಯಾಗಿರುವುದಿಲ್ಲ ಮತ್ತು ಮುಳ್ಳುಸೋಗೆ ಗ್ರಾಮ ಸ.ನಂ. 59 ರಲ್ಲಿರುವ ಕೆರೆ (ಸೋಮೇಶ್ವರ ದೇವರ ಕೆರೆ, ಆರ್.ಟಿ.ಸಿ ಯಂತೆ 1.64 ಎಕರೆ) ಒತ್ತುವರಿಯಾಗಿರುವುದಿಲ್ಲ ಎಂಬುದಾಗಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಸೋಮವಾರಪೇಟೆ ಇವರ ವರದಿಯನ್ನು ತಹಶೀಲ್ದಾರರು ಕುಶಾಲನಗರ ಇವರು ಈ ಕಛೇರಿಗೆ ಕಳುಹಿಸಿದ್ದು, ಸದರಿ ಕೆರೆಗಳ ಒತ್ತುವರಿ ಆಗಿರುವುದಿಲ್ಲ ಎಂಬುದಾಗಿ ವರದಿ ನೀಡಿರುತ್ತಾರೆ. ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ಪು.ತಿ.ನೋ

<u>ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:</u> ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕೆರೆಯನ್ನು ಅಭಿವೃದ್ಧಿಪಡಿಸುವ ಸಂಬಂಧ ಪ್ರಾಧಿಕಾರದ ಮುಂದಿನ ಕ್ರಮವಾಗಿ ಸರ್ಕಾರದ ಸುತ್ತೋಲೆ ದಿನಾಂಕ: 04–08–2015 ರಂತೆ ಕೆರೆ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಸಂಬಂಧಿತ ಇಲಾಖೆಯ ಪೂರ್ವಾನುಮತಿ ಪಡೆಯಬೇಕಿರುತ್ತದೆ ಹಾಗೂ ಸರ್ಕಾರದ ಪತ್ರ ದಿನಾಂಕ: 25–02–2017 ರಂತೆ ಸಣ್ಣ ನೀರಾವರಿ ಇಲಾಖೆಯ ಸಹಯೋಗದೊಂದಿಗೆ ಸವಿಸ್ತಾರವಾದ ಅಂದಾಜು (Comprehensive Estimate) ಹಾಗೂ ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು (DPR) ಸುತ್ತೋಲೆಗಳಲ್ಲಿ ನಿಗಧಿಪಡಿಸಿರುವ ಮಾನದಂಡದ ಅಂಶಗಳಿಗೆ ಅನುಗುಣವಾಗಿ ತಯಾರಿಸಿಕೊಂಡು ಪೂರಕ ದಾಖಲೆಗಳೊಂದಿಗೆ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಸಹಮತ/ಮೇಲುರುಜುವಿನೊಂದಿಗೆ ಸರ್ಕಾರದ ಪೂರ್ವಾನುಮತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಬೇಕಿರುತ್ತದೆ. ಪ್ರಾಧಿಕಾರದಿಂದ ನೀಡುತ್ತಿರುವ ಸಾರ್ವಜನಿಕ ಸೇವೆಗಳಾದ ವಿನ್ಯಾಸ ಅನುಮೋದನೆ ಹಾಗೂ ಕಟ್ಟಡ ನಕ್ಷೆಗೆ ನೀಡುತ್ತಿರುವ ತಾಂತ್ರಿಕ ಅನುಮೋದನೆ ಸಂಬಂಧ ಪಾವತಿಸಿಕೊಳ್ಳುತ್ತಿರುವ ಶುಲ್ಕದ ಪೈಕಿ ಕೆರೆ ಅಭಿವೃದ್ಧಿ ಉದ್ದೇಶಕ್ಕೆ ಪಾವತಿಸಿಕೊಂಡಿರುವ ಶುಲ್ಕ ಬ್ಯಾಂಕ್ ಖಾತೆಯಲ್ಲಿ ಜನವರಿ 2022 ರ ಅಂತ್ಯಕ್ಕೆ ರೂಪಾಯಿ 2,34,13,217=00 ಗಳಿರುತ್ತದೆ. ಹಾಗಾಗಿ ತಾವರೆಕೆರೆ ಹಾಗೂ ಸೋಮೇಶ್ವರ ದೇವರ ಕೆರೆಗಳಲ್ಲಿ ಸೂಕ್ತವಾಗಿರುವ ಕೆರೆಯನ್ನು ಗುರುತಿಸಿಕೊಂಡು ಅಭಿವೃದ್ಧಿಪಡಿಸುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

<u>ನಿರ್ಣಯ:</u> ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಪ್ರಸ್ತುತ ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಬೈಚನಹಳ್ಳಿ ಗ್ರಾಮ ಸ.ನಂ. 35 ಹಾಗೂ ಮುಳ್ಳುಸೋಗೆ ಗ್ರಾಮ ಸ.ನಂ. 59 ರಲ್ಲಿರುವ ಕೆರೆಗಳು ಆರ್.ಟಿ.ಸಿ ಯಂತೆ ಸರ್ಕಾರ ಎಂಬುದಾಗಿ ನಮೂದು ಇರುವುದನ್ನು ಸಭೆಯಲ್ಲಿ ಗಮನಿಸಲಾಯಿತು. ಕೆರೆಯ ಮಾಲೀಕತ್ವದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳಲ್ಲಿ ಸಭೆಯಲ್ಲಿ ವಿಚಾರಿಸಲಾಗಿ ಸದರಿ ಕೆರೆಗಳು ಕಂದಾಯ ಇಲಾಖೆಯಿಂದ ಸ್ಥಳೀಯ ಸಂಸ್ಥೆಗೆ ಹಸ್ತಾಂತರವಾಗಿರುವುದಿಲ್ಲ ಎಂಬುದಾಗಿ ಸಭೆಗೆ ತಿಳಿಸಿದರು. ವಿಸ್ತೃತವಾಗಿ ಚರ್ಚೆ ನಡೆದು ಸುತ್ತೋಲೆಯಂತೆ ಕೆರೆ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಸಂಬಂಧಿಸಿದ ಇಲಾಖೆಯ ಪೂರ್ವಾನುಮತಿ ಪಡೆಯಬೇಕಿರುವುದರಿಂದ ಬೈಚನಹಳ್ಳಿ ಗ್ರಾಮ ಸ.ನಂ. 35 ಹಾಗೂ ಮುಳ್ಳುಸೋಗೆ ಗ್ರಾಮ ಸ.ನಂ. 59 ರಲ್ಲಿ ಇರುವ ಕೆರೆಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಪೂರ್ವಾನುಮತಿ ನೀಡುವಂತೆ ಕೋರಿ ಕಂದಾಯ ಇಲಾಖೆಗೆ ಪತ್ರ ಬರೆಯುವಂತೆ ಹಾಗೂ ಪೂರ್ವಾನುಮತಿ ದೊರಕಿದ ನಂತರ ಸದರಿ ಎರಡು ಕೆರೆಗಳಿಗೆ ಸುತ್ತೋಲೆಯಲ್ಲಿ ನಿಗಧಿಪಡಿಸಿರುವ ಮಾನದಂಡ ಅಂಶಗಳಿಗೆ ಅನುಗುಣವಾಗಿ ಸವಿಸ್ತಾರವಾದ ಅಂದಾಜು (Comprehensive Estimate) ಹಾಗೂ ಯೋಜನೆಯ ವಿಸ್ತೃತಾ ಯೋಜನಾ ವರದಿಯನ್ನು (DPR) ಅನ್ನು ಸಿದ್ಧಪಡಿಸಿ ನೀಡುವಂತೆ ಕೋರಿ ಸಣ್ಣ ನೀರಾವರಿ ಇಲಾಖೆಗೆ ಪತ್ರ ಬರೆಯುವಂತೆ ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿದೆ.

<u>ವಿಷಯ ಸಂಖ್ಯೆ: 05</u> – ಯೋಜನಾ ಪ್ರಾಧಿಕಾರಕ್ಕೆ ಸ್ವಂತ ಕಟ್ಟಡವನ್ನು ನಿರ್ಮಿಸಲು 1ನೇ ಬ್ಲಾಕ್, ಸರ್ವೆ ನಂ. 80/2 ರ ಚಂದ್ರಶೇಖರ್ ಬಡಾವಣೆಯ 0.2664 ಎಕರೆ (26.64 ಸೆಂಟ್ಸ್) ನಾಗರೀಕ ಸೌಲಭ್ಯ ನಿವೇಶನವನ್ನು ಪಟ್ಟಣ ಪಂಚಾಯಿತಿಯಿಂದ ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸುವ ಬಗ್ಗೆ.

<u>ಟಿಪ್ಪಣಿ :</u> ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 18–09–2021 ರಂದು ನಡೆದ ಯೋಜನಾ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಗಿ, ವಿಷಯದ ಬಗ್ಗೆ ಸುಧೀರ್ಘವಾದ ಚರ್ಚೆ ನಡೆದು ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿನ ಬೈಚನಹಳ್ಳಿ ಗ್ರಾಮದ ಸ.ನಂ. 80/2 ರಲ್ಲಿನ ಚಂದ್ರಶೇಖರ್ ಬಡಾವಣೆಯಲ್ಲಿ ನಾಗರೀಕ ಸೌಲಭ್ಯಕ್ಕೆ ಕಾಯ್ದಿರಿಸಿರುವ ನಿವೇಶನದಲ್ಲಿ ಕುಶಾಲನಗರ ಯೋಜನಾ ಪ್ರಾಧಿಕಾರದ ಸ್ವಂತ ಕಟ್ಟಡ ನಿರ್ಮಿಸುವ

ಸಂಬಂಧ ಸದರಿ ನಿವೇಶನವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸುವಂತೆ ಪಟ್ಟಣ ಪಂಚಾಯಿತಿಗೆ ಪತ್ರ ಬರೆಯುವಂತೆ ಸದಸ್ಯ ಕಾರ್ಯದರ್ಶಿಯವರಿಗೆ ಸಭೆಯು ಸೂಚಿಸಿ ನಿರ್ಣಯಿಸಿದ್ದು, ಆ ಪ್ರಕಾರ ಪಟ್ಟಣ ಪಂಚಾಯಿತಿಗೆ ಪತ್ರ ಬರೆಯಲಾಗಿದ್ದು, ಕುಶಾಲನಗರ ಪಟ್ಟಣ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ 1ನೇ ಬ್ಲಾಕ್, ಚಂದ್ರಶೇಖರ್ ಬಡಾವಣೆಯ ಸರ್ವೆ ನಂ. 80/2 ರ 0.2664 ಎಕರೆ (26.64 ಸೆಂಟ್ಸ್)ಸಿ.ಎ. ನಿವೇಶನವನ್ನು ಕುಶಾಲನಗರ ಯೋಜನಾ ಪ್ರಾಧಿಕಾರಕ್ಕೆ ಸ್ವಂತ ಕಟ್ಟಡ ಹೊಂದಲು ನೀಡಲು ನಿರ್ಣಯಿಸಿರುವುದಾಗಿ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯಿತಿ ಇವರು ಈ ಕಛೇರಿಗೆ ಪತ್ರ ಬರೆದಿದ್ದು ವಿಷಯವನ್ನು ಸಭೆಯ ಚರ್ಚೆಗೆ ಮಂಡಿಸಿದೆ.

ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿದಂತೆ ಕುಶಾಲನಗರ ಪಟ್ಟಣ ಪಂಚಾಯಿತಿ 1ನೇ ಬ್ಲಾಕ್, ಚಂದ್ರಶೇಖರ್ ಬಡಾವಣೆ ಸ.ನಂ. 80/2 ರಲ್ಲಿನ 0.2664 ಎಕರೆ ನಿವೇಶನವನ್ನು ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡಕ್ಕಾಗಿ ನೀಡಲು ಪಟ್ಟಣ ಪಂಚಾಯಿತಿಯಿಂದ ತೀರ್ಮಾನಿಸಲಾಗಿದ್ದು ಸದರಿ ನಿವೇಶನವು ಈ ಹಿಂದೆ ನಗರ ಯೋಜನಾ ಇಲಾಖೆಯಿಂದ ಅನುಮೋದನೆಗೊಂಡಿರುವ ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿರಿಸಿರುವ ನಿವೇಶನವಾಗಿದ್ದು, ಸದರಿ ನಿವೇಶನದ ಖಾತೆ (ನಮೂನೆ–3) ಯನ್ನು ಪ್ರಾಧಿಕಾರದ ಹೆಸರಿಗೆ ನೋಂದಾಯಿಸಿಕೊಡುವಂತೆ ಹಾಗೂ ಅಗತ್ಯ ದಾಖಲಾತಿಗಳನ್ನು ಒದಗಿಸುವಂತೆ ಈಗಾಗಲೇ ಪಟ್ಟಣ ಪಂಚಾಯಿತಿಗೆ ಪತ್ರ ಬರೆಯಲಾಗಿದ್ದು, ಖಾತೆ ಬದಲಾವಣೆ ಆದ ನಂತರ ಲೋಕೋಪಯೋಗಿ ಇಲಾಖೆಯಿಂದ ಕಟ್ಟಡ ನಕ್ಷೆ ಹಾಗೂ Estimation ಅನ್ನು ಸಿದ್ಧಪಡಿಸಿಕೊಂಡು ಸರ್ಕಾರದ ಅನುಮೋದನೆಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಿರುತ್ತದೆ. ವಿಷಯವನ್ನು ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ: ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಸದರಿ ನಾಗರೀಕ ಸೌಲಭ್ಯದ ನಿವೇಶನವು ಈ ಹಿಂದೆ ನಗರ ಯೋಜನಾ ಇಲಾಖೆಯಿಂದ ಅನುಮೋದನೆಗೊಂಡಿರುವ ವಿನ್ಯಾಸದಲ್ಲಿನ ನಿವೇಶನವಾಗಿದ್ದು ಬಡಾವಣೆಯ ಮಾಲೀಕರು ನಾಗರೀಕ ಸೌಲಭ್ಯ ನಿವೇಶನವನ್ನು ಪಟ್ಟಣ ಪಂಚಾಯಿತಿಗೆ ದಾನಪತ್ರದ ಮೂಲಕ ಹಸ್ತಾಂತರಿಸಿರುವುದರಿಂದ ಸದರಿ ನಿವೇಶನವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಕ್ರಮವಹಿಸಲು ಹಾಗೂ ಖಾತೆ (ನಮೂನೆ–3) ಅನ್ನು ಸದಸ್ಯ ಕಾರ್ಯದರ್ಶಿ ಯೋಜನಾ ಪ್ರಾಧಿಕಾರ ಕುಶಾಲನಗರ ಹೆಸರಿಗೆ ಬದಲಾವಣೆ ಮಾಡಿಕೊಡುವಂತೆ ಪಟ್ಟಣ ಪಂಚಾಯಿತಿಗೆ ಮತ್ತೊಮ್ಮೆ ಪತ್ರ ಬರೆಯುಂತೆ ಹಾಗೂ ಪಟ್ಟಣ ಪಂಚಾಯಿತಿಯಿಂದ ದಾಖಲೆಗಳು ಹಸ್ತಾಂತರಿಸಿಕೊಂಡ ನಂತರ ಕಟ್ಟಡ ನಕ್ಷೆ ಹಾಗೂ Estimation ಅನ್ನು ಸಿದ್ಧಪಡಿಸಿಕೊಡುವಂತೆ ಕೋರಿ ಲೋಕೋಪಯೋಗಿ ಇಲಾಖೆಗೆ ಪತ್ರ ಬರೆಯುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ ನಿರ್ಣಯಿಸಲಾಗಿದೆ.

ವಿಷಯ ಸಂಖ್ಯೆ: 06– ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು:–

ಅ):– ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ, ಕೂಡ್ಲೂರು ಗ್ರಾಮದ ಸ.ನಂ. 3/16 ರಲ್ಲಿನ 3.00 ಎಕರೆ ಮತ್ತು ಸ.ನಂ. 3/17 ರಲ್ಲಿನ 2.85 ಎಕರೆ ಒಟ್ಟು 5.85 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ. (**ಅರ್ಜಿದಾರರು:– ಶ್ರೀಮತಿ ಸುಬ್ಬಮ್ಮ ಕೋಂ ಅಪ್ಪೇಗೌಡ ಮತ್ತು ಶ್ರೀಮತಿ ಲಲಿತ ಕೋಂ ಕುಳ್ಳೇಗೌಡ.**)

ಟಿಪ್ಪಣಿ : ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಕ್ಷರು ಮಾತನಾಡಿ ದಿನಾಂಕ: 18–09–2021 ರಂದು ನಡೆದ ಯೋಜನಾ ಪ್ರಾಧಿಕಾರದ ಸಭೆ ವಿಷಯ ಸಂಖ್ಯೆ 10 ರಲ್ಲಿ ಕೂಡ್ಲೂರು ಗ್ರಾಮ ಸ.ನಂ. 3/16 ರಲ್ಲಿನ 3.00 ಎಕರೆ ಹಾಗೂ ಸ.ನಂ. 3/17 ರಲ್ಲಿನ 2.85 ಎಕರೆ ಹೀಗೆ ಒಟ್ಟು 5.85 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ

ಬಹು–ನಿವೇಶನ ವಿನ್ಯಾಸ ಅನುಮೋದನೆ ನೀಡಲು ಚರ್ಚಿಸಿ ನಿರ್ಣಯಿಸಲಾಗಿದೆ. ಆದರೆ ಸದರಿ ನಿರ್ಣಯದಲ್ಲಿ ಅರ್ಜಿದಾರರು ಸಲ್ಲಿಸಿರುವ ಜಂಟಿ ಅಭಿವೃದ್ಧಿ ಪ್ರಮಾಣ ಪತ್ರವನ್ನು ನೋಂದಾಯಿಸಿ ಪ್ರಾಧಿಕಾರದ ಕಛೇರಿಗೆ ಸಲ್ಲಿಸುವಂತೆ ನಿರ್ಣಯಿಸಿದ್ದು, ಆ ಪ್ರಕಾರ ಪ್ರಮಾಣ ಪತ್ರವನ್ನು ನೋಂದಾಯಿಸಿ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಹಿಂಬರಹ ನೀಡಲಾಗಿರುತ್ತದೆ. ಈ ಬಗ್ಗೆ ನೋಂದಣಿ ಮಾಡಿಸಲು ಉಪನೋಂದಣಿ ಕಛೇರಿಯಲ್ಲಿ ವಿಚಾರ ಮಾಡಲಾಗಿ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಅಂದಾಜು 20 ಲಕ್ಷ ಪಾವತಿಸಬೇಕಾಗಿರುವುದಾಗಿ ಹಾಗೂ ಮುಂದೆ ಜಮೀನನ್ನು ಅಭಿವೃದ್ಧಿಪಡಿಸಿದ ನಂತರ ಜಂಟಿ ಅಭಿವೃದ್ಧಿ ಪ್ರಮಾಣವನ್ನು ರದ್ದುಪಡಿಸಲು ಹಾಗೂ ನಿವೇಶನಗಳನ್ನು ಮಾರಾಟ ಮಾಡುವಾಗ ಮತ್ತೆ ನೋಂದಣಿ ಶುಲ್ಕ ಪಾವತಿಸಬೇಕಾಗಿರುವುದರಿಂದ ಸದರಿ ವೆಚ್ಚಗಳನ್ನು ಆರ್ಥಿಕ ಮುಗ್ಗಟ್ಟಿನಿಂದ ಭರಿಸಲು ಕಷ್ಟವಾಗುತ್ತದೆ ಹಾಗಾಗಿ ಪ್ರಾಧಿಕಾರದ ಸಭೆಯ ನಿರ್ಣಯದಲ್ಲಿ ಜಂಟಿ ಅಭಿವೃದ್ಧಿ ಪ್ರಮಾಣ ಪತ್ರವನ್ನು ನೋಂದಾಯಿಸಿ ಕಛೇರಿಗೆ ಸಲ್ಲಿಸುವಂತೆ ತೆದುಕೊಂಡಿರುವ ನಿರ್ಣಯವನ್ನು ಬಿಟ್ಟು ಈಗಾಗಲೇ ಕಛೇರಿಗೆ ಸಲ್ಲಿಸಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ ವಿನ್ಯಾಸ ಅನುಮೋದನೆ ನೀಡುವಂತೆ ಶ್ರೀಮತಿ ಪುಟ್ಟಮ್ಮ ಮತ್ತು ಶ್ರೀಮತಿ ಲಲಿತ ಇವರುಗಳು ಕೋರಿರುವುದಾಗಿ ಸಭೆಗೆ ತಿಳಿಸಿದರು.

ನಿರ್ಣಯ: ವಿಷಯದ ಬಗ್ಗೆ ವಿಸ್ತೃತವಾದ ಚರ್ಚೆಯನ್ನು ಸಭೆಯು ನಡೆಸಿತು. ಸದಸ್ಯರುಗಳು ಮಾತಾನಾಡಿ ತೆಗೆದುಕೊಂಡಿರುವ ನಿರ್ಣಯವನ್ನು ಬದಲಾಯಿಸಲು ಅವಕಾಶವಿದೆಯೇ ಎಂಬುದಾಗಿ ಸದಸ್ಯಕಾರ್ಯದರ್ಶಿಯವರಲ್ಲಿ ಕೇಳಿದರು. ಸದಸ್ಯ ಕಾರ್ಯದರ್ಶಿಯವರು ಮಾತಾನಾಡಿ ಯೋಜನಾ ಪ್ರಾಧಿಕಾರದ ನಿಯಮ 1961 ರ ನಿಯಮ 18 ರಲ್ಲಿ ನಿರ್ಣಯ ತೆಗೆದುಕೊಂಡ ಮೂರು ತಿಂಗಳ ಅವಧಿಯೊಳಗೆ ನಿರ್ಣಯವನ್ನು (ಕನಿಷ್ಟ 1/3 ಭಾಗದ ಸದಸ್ಯರ ಸಮ್ಮತವಿಲ್ಲದೇ ಇದ್ದರೆ) ಮಾರ್ಪಾಡು ಮತ್ತು ರದ್ದು ಮಾಡಲು ಅವಕಾಶವಿರುವುದಿಲ್ಲ ಎಂಬುದಾಗಿ ಸಭೆಗೆ ತಿಳಿಸಿದರು ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಂಟಿ ಅಭಿವೃದ್ಧಿ ಪ್ರಮಾಣ ಪತ್ರವನ್ನು ನೋಂದಾಯಿಸಿ ಸಲ್ಲಿಸಲು ಸೂಚಿಸಿರುವ ನಿರ್ಣಯವು ಸಮಪರ್ಕವಾಗಿದ್ದು, ಒಂದೊಮ್ಮೆ ಸದರಿ ನಿರ್ಣಯವನ್ನು ಮಾರ್ಪಾಡಿಸಿದಲ್ಲಿ ಅಥವಾ ರದ್ದುಪಡಿಸಿದಲ್ಲಿ ಮುಂದೆ ಸಮಸ್ಯೆಗಳು ಉಂಟಾಗುವ ಸಾಧ್ಯತೆಗಳಿರುವುದರಿಂದ ತೊಂದರೆ ಅನುಭವಿಸಬೇಕಾಗಿರುತ್ತದೆ ಹಾಗಾಗಿ ಸದರಿ ನಿರ್ಣಯದಲ್ಲಿ ಯಾವುದೇ ಬದಲಾವಣೆ ಮಾಡದೇ ಇರುವುದು ಸೂಕ್ತ ಎಂಬುದಾಗಿ ಸದಸ್ಯಕಾರ್ಯರ್ಶಿಯವರು ಸಭೆಗೆ ತಿಳಿಸಿದರು. ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಜಂಟಿ ಅಭಿವೃದ್ಧಿ ಪ್ರಮಾಣ ಪತ್ರವನ್ನು ನೋಂದಾಯಿಸಲು ಹೆಚ್ಚುವರಿಯಾಗಿ ಶುಲ್ಕ ಭರಿಬೇಕಾಗಿರುವುದರಿಂದ ಅರ್ಜಿದಾರರಿಗೆ ಆರ್ಥಿಕ ಹೊರೆ ಉಂಟಾಗುವುದರಿಂದ ಹಾಗೂ ಪ್ರಸ್ತುತ ಕೊರೊನಾ ಸಂಕಷ್ಟವಿರುವುದರಿಂದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಹಾಗೂ ಬಡಾವಣೆ ನಿರ್ಮಾಣ ಮಾಡುವವರನ್ನು ಉತ್ತೇಜಿಸುವ ಸಲುವಾಗಿ ಈ ಹಿಂದೆ ತೆಗೆದುಕೊಂಡಿರುವ ನಿರ್ಣಯದ ಅವಧಿ ಮೂರು ತಿಂಗಳು ಮೀರಿರುವುದರಿಂದ ಅರ್ಜಿದಾರರು ಕೋರಿರುವಂತೆ ದಿನಾಂಕ: 18–09–2021 ರಂದು ನಡೆದ ಸಭೆ ವಿಷಯ ಸಂಖ್ಯೆ 10 ರಲ್ಲಿ ನಿರ್ಣಯಿಸಿರುವ ಜಂಟಿ ಅಭಿವೃದ್ಧಿ ಪ್ರಮಾಣ ಪತ್ರವನ್ನು ನೋಂದಾಯಿಸಿ ಪ್ರಾಧಿಕಾರದ ಕಛೇರಿಗೆ ಸಲ್ಲಿಸುವಂತೆ ತೆಗೆದುಕೊಂಡಿರುವ ನಿರ್ಣಯವನ್ನು ಮಾರ್ಪಡಿಸಿ ಸದರಿ ಪ್ರಮಾಣ ಪತ್ರವನ್ನು ಸಾಕ್ಷಿಗಳ ಸಹಿಯೊಂದಿಗೆ ಸಲ್ಲಿಸುವಂತೆ ಸೂಚಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿದೆ.

ಆ):– ಮುಳ್ಳುಸೋಗೆ ಗ್ರಾಮ, ಸ.ನಂ. 59 ರಲ್ಲಿರುವ (ಸೋಮೇಶ್ವರ) ಕೆರೆಗೆ ಗಡಿಕಲ್ಲು ಅಳವಡಿಸುವ ಬಗ್ಗೆ.

ಟಿಪ್ಪಣಿ : ವಿಷಯಕ್ಕೆ ಸಂಬಂಧಿಸಿದಂತೆ ಸದಸ್ಯರು ಮಾತಾನಾಡಿ ಮುಳ್ಳುಸೋಗೆ ಗ್ರಾಮ ಸ.ನಂ. 59 ರಲ್ಲಿರುವ (ಸೋಮೇಶ್ವರ) ಕೆರೆಯ ಸರ್ವೆ ಕಾರ್ಯ ಈಗಾಗಲೇ ನಡೆದಿದ್ದು ಒತ್ತುವರಿ ಇರುವುದಿಲ್ಲ ಎಂಬುದಾಗಿ ತಿಳಿದುಬಂದಿರುತ್ತದೆ, ಆದರೆ ಈವರೆಗೆ ಕೆರೆಯ ಅಂಚನ್ನು ಗುರುತಿಸಲು ಗಡಿಯಲ್ಲಿ ಕಲ್ಲು ನೆಟ್ಟು ಗಡಿಗುರುತಿಸಿರುವುದಿಲ್ಲ ಎಂಬುದಾಗಿ ಸಭೆಗೆ ತಿಳಿಸಿದರು. ಈ ಬಗ್ಗೆ ಚರ್ಚೆ ನಡೆದು ಮುಖ್ಯಾಧಿಕಾರಿಯವರನ್ನು

ಗಡಿ ಕಲ್ಲು ನೆಡದೆ ಇರಲು ಕಾರಣವೇನು ಎಂದು ಸದಸ್ಯರುಗಳು ಕೇಳಿದರು. ಈ ಬಗ್ಗೆ ಮಾತಾನಾಡಿದ ಮುಖ್ಯಾಧಿಕಾರಿಯವರು ಕೆರೆಯ ಸುತ್ತ ಗಿಡಗಂಟೆಗಳು ಬೆಳೆದಿರುವುದರಿಂದ ಕೆರೆಯ ಅಂಚನ್ನು ಗಡಿಕಲ್ಲು ನೆಡಲು ವಿಳಂಬವಾಗಿರುತ್ತದೆ ಎಂಬುದಾಗಿ ಸಭೆಗೆ ತಿಳಿಸಿದರು.

ನಿರ್ಣಯ: ವಿಷಯದ ಬಗ್ಗೆ ಸಭೆಯಲ್ಲಿ ವಿಸ್ತೃತವಾದ ಚರ್ಚೆ ನಡೆದು ಮುಳ್ಳುಸೋಗೆ ಗ್ರಾಮ ಸ.ನಂ. 59 ರಲ್ಲಿ ಕೆರೆಯ ಗಡಿಗಳಿಗೆ ಕಲ್ಲು ನೆಡುವಂತೆ ಪಟ್ಟಣ ಪಂಚಾಯಿತಿಗೆ ಪತ್ರ ಬರೆಯುವಂತೆ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿದೆ.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ